| | | |
|---|---|---|
| ಓ ಎಸ್ | 72/2017 | ಪಿ.ಡಬ್ಲ್ಯೂಃ 1 |

ಇಂದು ದಿಃ27/01/2021 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿ ಪರ ವಕೀಲರಿಂದಃ-

ನಾನು ಚಿಕ್ಕಮಗಳೂರಿನ ಸಮೀಪ ಮೈಲಿಮನೆ ಎಂಬಲ್ಲಿ ವಾಸವಿದ್ದೇನೆ. ಸುಮಾರು 29 ವರ್ಷಗಳಿಂದ ಅಲ್ಲಿ ವಾಸವಿದ್ದೇನೆ. 1996 ನೇ ಸಾಲಿನಲ್ಲಿ ನಾನು ಅದೇ ವಿಳಾಸದಲ್ಲಿ ವಾಸವಿದ್ದೆ. ನನ್ನ ತಂದೆ ತಾಯಿ ಜೀವಂತ ಇರುವವರೆಗೂ ನಂಜನಗೂಡಿನಲ್ಲಿಯೇ ವಾಸವಿದ್ದರು ಎಂದರೆ ನಿಜ. ನನ್ನ ಅಣ್ಣ ಅಂದರೆ 3 ನೇ ಪ್ರತಿವಾದಿ ಚಂದ್ರಶೇಖರ ರವರು ನನ್ನ ತಂದೆ ತಾಯಿ ಜೊತೆಗೆ ನಂಜನಗೂಡಿನಲ್ಲಿಯೇ ವಾಸವಿದ್ದರು. ನನ್ನ ತಂದೆಯನ್ನು ಬೆಂಗಳೂರಿನ ಸೇಂಟ್ ಜಾನ್ಸ್ ಆಸ್ಪತ್ರೆಗೆ ಯಾವ ಇಸವಿಯಲ್ಲಿ ಅಡ್ ಮಿಟ್ ಮಾಡಿಸಿದ್ದು ಎಂದು ಕೇಳಿದರೆ ಹೇಳಲು ನೆನಪಿಲ್ಲ. ಅಂದಾಜು ಎಷ್ಟು ವರ್ಷಗಳ ಹಿಂದೆ ಅಡ್ ಮಿಟ್ ಮಾಡಿಸಿದ್ದು ಎಂದು ಕೇಳಿದರೆ ಹೇಳಲು ನೆನಪಿಲ್ಲ. ಸದರಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ನಂತರ ನನ್ನ ತಂದೆ ಸುಮಾರು 5 ವರ್ಷಗಳ ಕಾಲ ಬದುಕಿದ್ದರು. ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಬಂದ ನಂತರ ನನ್ನ ತಂದೆ ನಂಜನಗೂಡಿನಲ್ಲಿ ಅವರ ಅದೇ ವಿಳಾಸದಲ್ಲಿ ವಾಸ ಮಾಡಿದ್ದರು. ಡಿಸ್ಚಾರ್ಜ್ ಆಗಿ ಬಂದ ನಂತರ ನನ್ನ ತಂದೆ ನನ್ನ ಜೊತೆ ವಾಸವಿರಲಿಲ್ಲ. ಸೆಂಟ್ ಜಾನ್ಸ್ ಆಸ್ಪತ್ರೆಗೆ ನಾನು ನನ್ನ ತಂದೆಯನ್ನು ದಾಖಲಿಸಿದ್ದೆ ಎಂದು ಹೇಳುತ್ತಿರುವ ಕುರಿತು ಸದರಿ ಆಸ್ಪತ್ರೆಯ ದಾಖಲೆಗಳನ್ನು ಹಾಜರುಪಡಿಸಿದ್ದೇನೆಯೇ ಎಂದು ಕೇಳಿದರೆ ನನ್ನ ತಾಯಿ ಸದರಿ ಆಸ್ಪತ್ರೆಯಲ್ಲಿ ನನ್ನ ತಂದೆಯನ್ನು ನೋಡಿಕೊಳ್ಳಲೆಂದು ಇದ್ದರು ಹಾಗೂ ಆಸ್ಪತ್ರೆಯ ಖರ್ಚನ್ನು ನನ್ನ ತಂದೆಯ ದುಡ್ಡಿನಿಂದಲೇ ಅಂದರೆ ಬಾಡಿಗೆ ಆದಾಯದಿಂದಲೇ ನನ್ನ ತಾಯಿ ಪಾವತಿಸಿದ್ದರು ಹಾಗೂ ನಾವೆಲ್ಲಾ ನಮ್ಮ ತಂದೆಯನ್ನು ನೋಡಿಕೊಂ ಡಿದ್ದೇವೆ ಹಾಗೂ ಆಸ್ಪತ್ರೆಯ ದಾಖಲೆಗಳು ನನ್ನ ಬಳಿ ಇಲ್ಲ, ಆದರೆ ಆಸ್ಪತ್ರೆಗೆ

ಹೋದರೆ ಆ ದಾಖಲೆಗಳು ಸಿಗುತ್ತವೆ ಎಂದು ನುಡಿಯುತ್ತೇನೆ.

ನಾವು 4 ಮಂದಿ ಅಕ್ಕ ತಂಗಿಯರು ಇರುವುದು ಎಂದರೆ ನಿಜ. ನಾವು ಸಹೋದರಿಯರು ಪರಸ್ಪರ ವಿಶ್ವಾಸದಿಂದ ಇದ್ದೇವೆ. ಈ ದಾವೆಯಲ್ಲಿ 1 ಮತ್ತು 2 ನೇ ಪ್ರತಿವಾದಿಯರು ನನ್ನ ಸಹೋದರಿಯರು ಎಂದರೆ ನಿಜ. ಅವರು ವಾದಿಯರಾಗಿ ಏಕೆ ಸೇರಿಕೊಂಡಿಲ್ಲ ಎಂದು ಕೇಳಿದರೆ ಹೇಳಲು ಗೊತ್ತಿಲ್ಲ. ದಾವೆಗಿಂತಲೂ ಮೊದಲು 1 ರಿಂದ 3 ನೇ ಪ್ರತಿವಾದಿಯರಿಗೆ ವಕೀಲರ ನೋಟೀಸು ಕಳುಹಿಸಿಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಆಗಿರುವ ನಿಪಿ 4 ಹಾಗೂ 5 ರಿಂದ 7 ಗಳು ನಾನು ಆ ರೀತಿ ಸುಳ್ಳು ಹೇಳುತ್ತಿರುವುದು ಎಂದು ತೋರಿಸುತ್ತೆ ಎಂದರೆ ಗೊತ್ತಿಲ್ಲ.

ದಾವಾ ಸ್ವತ್ತುಗಳು ಮನೆ, ವಾಣಿಜ್ಯ ಕಟ್ಟಡಗಳು , ಗದ್ದೆ ಹಾಗೂ ನನ್ನ ತಾಯಿಯ ಒಡವೆಗಳು ಆಗಿರುತ್ತೆ. ಈ ದಾವೆಯನ್ನು ನನ್ನ ತಂದೆಯ ಆಸ್ತಿಗಳ ವಿಭಾಗಕ್ಕಾಗಿ ಸಲ್ಲಿಸಿರುವುದು ಎಂದರೆ ನಿಜ. ನಾನು ಹೇಳಿರುವ ದಾವಾ ತಪಶೀಲು ಐಟಂ ನಂ.4 ರಲ್ಲಿ ಹೇಳಿರುವಂತಹ ಚರಾಸ್ತಿಗಳ ವಿವರ ಹೇಳಲು ತೊಂದರೆ ಇತ್ತೇ ಎಂದು ಕೇಳಿದರೆ ಅವೆಲ್ಲವೂ ಹಳೇ ಕಾಲದಿಂದ ಬಂದಿರುವಂತಹ ಒಡವೆಗಳು ಹಾಗೂ ವಿವರಗಳನ್ನು ಹೇಳಲು ಗೊತ್ತಿಲ್ಲ ಎಂದು ನುಡಿಯುತ್ತೇನೆ. ನನ್ನ ತಾಯಿ ಆಕೆ ಜೀವಂತ ಇರುವಾಗಲೇ ಒಡವೆಗಳನ್ನು ಹಂಚಿಬಿಟ್ಟಿದ್ದರು ಹಾಗೂ ಯಾವುದೇ ಒಡವೆಗಳನ್ನು ಉಳಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ದಾವೆಯಲ್ಲಿ ಹೇಳಿರುವ ಆಸ್ತಿಗಳನ್ನು ಬ್ಯಾಳಾರು ಗ್ರಾಮದ ಸ.ನಂ.242/2 ರಲ್ಲಿ 1 ಎಕರೆ 5 ಗುಂಟೆ ಜಮೀನು ನನ್ನ ತಂದೆಗೆ ಇತ್ತು ಎಂದರೆ ಅದನ್ನು ನನ್ನ ತಂದೆ ಅವರ ತಂದೆ ಜೀವಂತ ಇದ್ದಾಗಲೇ ಮಾರಾಟ ಮಾಡಿದ್ದರು ಎಂದು ನುಡಿಯುತ್ತೇನೆ. ಅದು ನನ್ನ ಮದೆವೆಗಿಂತಲೂ ಮೊದಲೇ ಮಾರಾಟ ಆಗಿರುವುದೇ ಎಂದು ಹೇಳಲು ನೆನಪಿಲ್ಲ. ದಾವಾ ಐಟಂ 3 ಆರ್ ಟಿ ಸಿ ನನ್ನ ತಂದೆ ಹೆಸರಿನಲ್ಲಿಯೇ ಇದೆ. ನಾನು ಹಾಜರುಪಡಿಸಿರುವ ದಾಖಲೆ ಪ್ರಕಾರ ಅದು ನನ್ನ ತಾಯಿ ಹೆಸರಲ್ಲಿ ಇದೆ ಎಂದರೆ ತಂದೆ ತೀರಿಕೊಂಡ ನಂತರ ತಾಯಿ ಹೆಸರಿಗೆ ಬಂದಿರುವುದು ಎಂದು ನುಡಿಯುತ್ತೇನೆ.

ಮನೆ, ವಾಣಿಜ್ಯ ಕಟ್ಟಡ ಹಾಗೂ ಜಮೀನು ಆಸ್ತಿಗಳು ನನ್ನ ತಂದೆ ಸ್ವಂತ ಸಂಪಾದಿಸಿದ ಆಸ್ತಿಗಳು ಎಂದರೆ ನಿಜ. ನನ್ನ ಮದುವೆ 1989 ರಲ್ಲಿ ಆಗಿತ್ತು. ನನ್ನ ಮದುವೆಯಾದ ನಂತರ ನಾನು ನಂಜನಗೂಡಿಗೆ ಆವಾಗಾವಾಗ ಬಂದು ಹೋಗುತ್ತಿದ್ದೆ. ನನ್ನ ತಂದೆ ತಾಯಿ ಜೊತೆ ನಾನು ವಿಶ್ವಾಸದಿಂದ ಇದ್ದೆ. ನನ್ನ ತಂದೆ ಆಸತ್ರೆಗೆ ದಾಖಲಾಗುವ ಮೊದಲು ಆರೋಗ್ಯವಾಗಿಯೇ ಇದ್ದರು ಹಾಗೂ ಅವರ ವ್ಯವಹಾರಗಳನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ನಿಜ. ನನ್ನ ತಂದೆ ಪಿ ಡಬ್ಲೂ ಡಿ ಕಂಟ್ರಾಕ್ಟರ್ ಆಗಿದ್ದರು ಹಾಗು ಮನೆಯ ಹತ್ತಿರ ಶಾಮಿಯಾನ ಹಾಗೂ ಪಾತ್ರೆ ಸಾಮಾನುಗಳನ್ನು ಬಾಡಿಗೆಗೆ ಕೊಡುವ ಏಜನ್ಸಿ ನಡೆಸುತ್ತಿದ್ದರು ಎಂದು ನುಡಿಯುತ್ತೇನೆ. ಅದೇ ಏಜನ್ಸಿಯನ್ನು ಈಗ 3 ನೇ ಪ್ರತಿವಾದಿ ಮುಂದುವರೆಸಿಕೊಂಡು ಹೋಗಿದ್ದಾರೆ. ಆ ಶಾಮಿಯಾನ ಏಜನ್ಸಿ ವಶದಲ್ಲಿರುವ ಚರಾಸ್ತಿಗಳಲ್ಲಿ ನಾನು ಹಿಸ್ಸೆ ಕೇಳಿಲ್ಲ ಎಂದರೆ ನಿಜ. ಈ ದಾವೆಯಲ್ಲಿ 3 ನೇ ಪ್ರತಿವಾದಿ ಒಂದು ವೀಲುನಾಮೆ ಹಾಜರುಪಡಿಸಿದ್ದಾರೆ ಎಂದರೆ ಈ ದಾವೆಯಲ್ಲಿ 3 ಪ್ರತಿವಾದಿ ಆ ರೀತಿ ಹೇಳಿದ ನಂತರವೇ ಆ ಬಗ್ಗೆ ಗೊತ್ತಾಗಿದ್ದು ಹಾಗೂ ಅದಕ್ಕೂ ಮೊದಲು ನನ್ನ ತಂದೆ ತಾಯಿ ಸದರಿ ವಿಚಾರವನ್ನು ನಮಗೆ ಹೇಳಿಲ್ಲ ಹಾಗೂ ಅದು ಸುಳ್ಳು ದಾಖಲೆ ಎಂದು ನಾನು ಹೇಳುತ್ತೇನೆ ಎಂದು ನುಡಿಯುತ್ತೇನೆ. ಸದರಿ ವೀಲುನಾಮೆ 1996 ರಲ್ಲಿಯೇ ನೋಂದಣಿ ಆಗಿದೆ ಎಂದರೆ ಗೊತ್ತಿಲ್ಲ. ಸದರಿ ವೀಲುನಾಮೆ ಬಗ್ಗೆ ನನಗೆ ಶುರುವಿನಿಂದಲೂ ಗೊತ್ತಿತ್ತು ಎಂದರೆ ಸರಿಯಲ್ಲ.

ದಾವಾ ಐಟಂ 2 ವಾಣಿಜ್ಯ ಕಟ್ಟಡದಲ್ಲಿ ನೆಲ ಅಂತಸ್ತಿನಲ್ಲಿ 2 ಅಂಗಡಿ ಹಾಗೂ ಮೇಲಂತಸ್ತಿನಲ್ಲಿ 2 ಅಂಗಡಿ ಒಟ್ಟು 4 ಅಂಗಡಿಗಳು ಇವೆ. ಮೇಂತಸ್ತಿನಲ್ಲಿ ಒಂದು ಪೋಟೋ ಸ್ಟುಡಿಯೋ ಹಾಗೂ ವಕೀಲರೊಬ್ಬರ ಕಛೇರಿ ಇದೆ. ನೆಲ ಅಂತಸ್ತಿನಲ್ಲಿ ಒಂದು ಶಾಮಿಯಾನದ ಅಂಗಡಿ ಹಾಗೂ ಒಂದು ಬಟ್ಟೆ ಅಂಗಡಿ ಇವೆ. ಶಾಮಿಯಾನದ ಅಂಗಡಿಯನ್ನು 3 ನೇ ಪ್ರತಿವಾದಿ ನಡೆಸುತ್ತಾನೆ. ಅದರಲ್ಲಿ ಮೊದಲು ಬಾಡಿಗೆ ಇದ್ದವರನ್ನು ಖಾಲಿ ಮಾಡಿಸಿ ಶಾಮಿಯಾನದ ಅಂಗಡಿ ನಡೆಸುತ್ತಿದ್ದಾನೆ. ಆ ರೀತಿ 20 ವರ್ಷದಿಂದ ಅಲ್ಲಿ

ಶಾಮಿಯಾನದ ಅಂಗಡಿ ನಡೆಸುತ್ತಿದ್ದಾನೆ. ಬಟ್ಟೆ ಅಂಗಡಿ ಇರುವ ಮಳಿಗೆಯನ್ನು ಬಾಡಿಗೆಗೆ ಕೊಡಲಾಗಿದೆ. ಸದರಿ ಬಟ್ಟೆ ಅಂಗಡಿ ಅಥವಾ ವಕೀಲರ ಕಛೇರಿ ಅಥವಾ ಪೋಟೋ ಸ್ಟುಡಿಯೋ ಮಳಿಗೆಗಳಿಂದ ಪ್ರತಿ ತಿಂಗಳಿಗೆ ಎಷ್ಟು ಬಾಡಿಗೆ ಆದಾಯ ಇದೆ ಎಂದು ಹೇಳಲು ಗೊತ್ತಿಲ್ಲ. ಪೋಟೋ ಸ್ಟುಡಿಯೋ ಹಾಗೂ ವಕೀಲರ ಕಛೇರಿಗೆ ನನ್ನ ತಂದೆ ಇದ್ದಾಗಲೇ ಬಾಡಿಗೆಗೆ ಕೊಟ್ಟಿದ್ದರು ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ಆವಾಗ ಇದ್ದ ಬಾಡಿಗೆದಾರರನ್ನು 3 ನೇ ಪ್ರತಿವಾದಿ ಬದಲಾಯಿಸಿದ್ದಾರೆ. ಆ ರೀತಿ ನನ್ನ ತಂದೆ ತೀರಿಕೊಂಡ 1 ಅಥವಾ 2 ವರ್ಷದ ನಂತರ ಬದಲಾಯಿಸಿದ್ದಾರೆ. ಬಟ್ಟೆ ಅಂಗಡಿಯನ್ನು ಕೂಡ ನನ್ನ ತಂದೆಯೇ ಬಾಡಿಗೆಗೆ ಕೊಟ್ಟಿದ್ದರು ಆದರೆ ನನ್ನ ತಂದೆ ತೀರಿಕೊಂಡ ನಂತರ 3 ನೇ ಪ್ರತಿವಾದಿ ಆ ಬಾಡಿಗೆದಾರರನ್ನು ಬದಲಾಯಿಸಿ ಇನ್ನೊಬ್ಬರಿಗೆ ಬಾಡಿಗೆಗೆ ಕೊಟ್ಟಿದ್ದಾರೆ. ಆ ಬಾಡಿಗೆಯಲ್ಲಿ ಹಿಸ್ಸೆ ಬೇಕು ಎಂದು ಇದುವರೆಗೂ ಕೇಳಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಕೋರ್ಟಿಗೆ ಅರ್ಜಿ ಸಲ್ಲಿಸಿ ಅದನ್ನು ಪಡೆಯಬೇಕು ಎಂದು ಅಂದುಕೊಂಡಿದ್ದೇನೆ.

ದಾವಾ ಐಟಂ 1 ರಿಂದ 3 ರ ತೆರಿಗೆಯನ್ನು ನನ್ನ ತಂದೆ ಇರುವಾಗ ನನ್ನ ತಂದೆಯೇ ಕಟ್ಟುದಿದ್ದರು ನಂತರ ನನ್ನ ತಾಯಿ ಕಟ್ಟುದಿದ್ದರು ಹಾಗೂ ನಂತರ ಯಾರು ಕಟ್ಟುತ್ತಿದ್ದಾರೆ ಎಂದು ಗೊತ್ತಿಲ್ಲ, ಆದರೆ 3 ನೇ ಪ್ರತಿವಾದಿ ಕಟ್ಟುತ್ತಿದ್ದಾರೆ ಎಂದು ಅಂದುಕೊಂಡಿದ್ದೇನೆ. 4 ನೇ ಪ್ರತಿವಾದಿ ಅದನ್ನು ಕಟ್ಟುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಮನೆಬಾಡಿಗೆಯ ಆದಾಯ ಇದೆ ಅದರಿಂದ ಕಟ್ಟುತ್ತಿರಬಹುದು.

25/03/1996 ರಂದು ನನ್ನ ತಂದೆ ಒಂದು ನೊಂದಾಯಿತ ವೀಲುನಾಮೆಯೆಂದನ್ನು ಬರೆದಿಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಪ್ರಕಾರ 7 ನೇ ಕ್ರಾಸ್ ನಲ್ಲಿರುವ ಮನೆ ಹಾಗೂ ಹರತಲೆಯ ಜಮೀನು ಅಂದರೆ ಈ ದಾವೆಯ ಐಟಂ ನಂ. 1 ಮತ್ತು 3 ನೇ ಸ್ವತ್ತು ಗಳು 4 ನೇ ಪ್ರತಿವಾದಿಗೆ ಸೇರತಕ್ಕದ್ದು ಎಂದು ನನ್ನ ತಂದೆ ಬರೆದಿಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ 2 ನೇ ಸ್ವತ್ತಿನಲ್ಲಿ ಇರುವ ವಾಣಿಜ್ಯ ಕಟ್ಟಡದಲ್ಲಿ ನೆಲ

ಅಂತಸ್ತು 4 ನೇ ಪ್ರತಿವಾದಿಗೆ ಸೇರಬೇಕೆಂದು ಹಾಗೂ 1 ನೇ ಅಂತಸ್ತು ನನ್ನ ತಂದೆಯ ಎಲ್ಲಾ ಮಗಳಂದಿರಗೂ ಜಂಟಿಯಾಗಿ ಸೇರಬೇಕೆಂದು ಸದರಿ ವೀಲುನಾಮೆಯಲ್ಲಿ ಬರೆದಿದ್ದಾರೆ

ಎಂದರೆ ಆ ರೀತಿ ವೀಲುನಾಮೆ ಬರೆದಿರುವ ಬಗ್ಗೆ ನಮಗೆ ನಮ್ಮ ತಂದೆ ಹೇಳಿಲ್ಲ ಹಾಗೂ ವೀಲುನಾಮೆಯನ್ನು ನಾನು ಒಪ್ಪುವುದಿಲ್ಲ ಎಂದು ನುಡಿಯುತ್ತೇನೆ. 1996 ರಲ್ಲಿ ನನ್ನ ತಂದೆ ಉತ್ತಮ ಆರೋಗ್ಯ ಹೊಂದಿದ್ದು ಮಾನಸಿಕವಾಗಿ ಕೂಡ ಸದೃಡವಾಗಿದ್ದು ವ್ಯವಹಾರಸ್ಥರು ಕೂಡ ಆಗಿದ್ದು ಅವರ ಸ್ವಂತ ಇಚ್ಚೆ ಮೇರೆಗೆ ಸದರಿ ವೀಲುನಾಮೆಯನ್ನು ಅವರು ಬರೆದಿಟ್ಟಿರುವುದು ಎಂದರೆ ಸರಿಯಲ್ಲ.

ನನ್ನ ತಂದೆ ತೀರಿಕೊಂಡಿದ್ದು 1999 ರಲ್ಲಿ ಎಂದರೆ ನಿಜ. ಅಲ್ಲಿಂದ ಈ ದಾವೆ ಹಾಕುವವರೆಗೂ ಸ್ವತ್ತಿನಲ್ಲಿ ವಿಭಾಗ ಬೇಕು ಎಂದು ನಾನು ಕೇಳಿಲ್ಲ. ಹರತಲೆಯ ಜಮೀನನ್ನು ನಾನು ನೋಡಿದ್ದೇನೆ. ನನ್ನ ತಾಯಿ ಇದ್ದಾಗ ಆ ಜಮೀನು ಬಳಿ ಹೋಗಿದ್ದೆ. ನನ್ನ ಮದುವೆಯಾದ ನಂತರ ಆ ಜಮೀನಿನ ಬಳಿ ನಾನು ಹೋಗಿಲ್ಲ. ಸದರಿ ಅಂಗಡಿ ಮಳಿಗೆಗಳ ಬಾಡಿಗೆಯ ಲೆಕ್ಕ ಕೊಡಿ ಎಂದು ನಾನು ತಂದೆ ಅಥವಾ ತಾಯಿ ಬಳಿ ಯಾವತ್ತೂ ಕೇಳಿಲ್ಲ. ನನ್ನ ತಾಯಿ 2016 ನೇ ಸಾಲಿನಲ್ಲಿ ತೀರಿಕೊಂಡಿದ್ದರು. ನನ್ನ ತಾಯಿ ತೀರಿಕೊಂಡ ನಂತರ ಬಾಡಿಗೆದಾರರ ಬಳಿ ಹೋಗಿ ಆ ಸ್ವತ್ತಿನಲ್ಲಿ ನಮಗೂ ಹಿಸ್ಸೆ ಹಕ್ಕು ಇದೆ ಎಂದು ಕೇಳಿಲ್ಲ.

ದಾವಾ ಐಟಂ 1 ಮತ್ತು 2 ರ ಅಸೆಸ್ ಮೆಂಟ್ ಕಾಪಿಗಳ ಖಾತೆ ಯಾರ ಹೆಸರಿನಲ್ಲಿ ಇತ್ತು ಎಂದು ನೋಡಿದ್ದೇನೆ. ಅದು ನನ್ನ ತಾಯಿ ಹೆಸರಲ್ಲಿ ಇತ್ತು. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಖಾತೆ ನನ್ನ ತಾಯಿ ಹೆಸರಿನಲ್ಲಿ ನನ್ನ ತಂದೆ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ವೀಲುನಾಮೆ ಬಗ್ಗೆ ಗೊತ್ತಾದ ನಂತರ ಆ ಪ್ರಕಾರ ಖಾತೆ ಬದಲಾವಣೆ ಮಾಡಲು 4 ನೇ ಪ್ರತಿವಾದಿಯು ಸೂಕ್ತ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ.

ನನ್ನ ತಂದೆ ತೀರಿಕೊಳ್ಳುವ ಮೊದಲು ವೀಲುನಾಮೆ ಬರೆದಿಟ್ಟ ಕಾರಣ ದಾವಾ ಆಸ್ತಿಗಳಲ್ಲಿ ಹಿಸೆ ಕೇಳುವ ಹಕ್ಕು ನಮಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವೀಲುನಾಮೆಯ ವ್ಯವಸ್ಥೆ ಪ್ರಕಾರ ಹೋಗಬೇಕೆ ಹೊರತು ವಾರಸು ಹಕ್ಕಿನ ಪ್ರಕಾರ ಹಿಸೆ

ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದ ಯಾವುದೇ ಕೋರಿಕೆ ಇಲ್ಲ, ಆದ್ದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್

ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.